
ಪರಿಣಾಮಗಳನ್ನು ಅರಿಯಲು ಹೊಸ ಅರಿವನ್ನು ನೀಡಬಲ್ಲದು. ವಾಸ್ತವ ಜಗತ್ತಿನ ಕಟುಸತ್ಯಗಳನ್ನು ಬ್ಯಾಪಾರಿ ಮುಲಾಜಿಲ್ಲದೆ ನಿರ್ಭೀತಿಯಿಂದ ಹೇಳುತ್ತಾರೆ. ಪ್ರಶ್ನಿಸುವುದು ಮತ್ತು ಪ್ರತಿಭಟಿಸುವುದು ಅವರ ಜಾಯಮಾನ. ಆತ್ಮಕಥನದೊಳಗೆ ಸ್ವವಿಮರ್ಶೆ ಹಾಗೂ ಸಮಾಜ ವಿಮರ್ಶೆ ಎರಡೂ ಒಟ್ಟಿಗೆ ಸಾಗುತ್ತವೆ.

ಸನಾತನ ಕಾಲದಿಂದಲೂ ಜಾತಿ ಅನನ್ಯತೆಗಾಗಿ ಸಾಕಷ್ಟು ಕಾದಾಟಗಳು, ಅಮಾನುಷ ಕೃತ್ಯಗಳು ನಡೆದಿವೆ ಎಂಬುದನ್ನು ಬಲ್ಲ ಬ್ಯಾಪಾರಿ ಅವರು, 'ಚಾಂಡಾಲರು' ಗಳಿಸಿಕೊಂಡಿದ್ದ ಉನ್ನತ ಸ್ತರವನ್ನು ಸಮರ್ಥಿಸುತ್ತಾರೆ. ಪ್ರಬಲ ರಾಜವಂಶಗಳ ಜೊತೆ ಕೈಜೋಡಿಸಿದ್ದ ಹುಸಿ ಉತ್ಪಾದಕ ಪುರೋಹಿತಶಾಹಿಯ ವರ್ಣಾಶ್ರಮ ವ್ಯವಸ್ಥೆಯನ್ನೂ, ವೇದ–ಶಾಸ್ತ್ರಗಳ ಒಳಗಿನ ಕಟ್ಟುಪಾಡುಗಳನ್ನೂ ತೀಕ್ಷ್ಣವಾಗಿ ವಿರೋಧಿಸುತ್ತಾರೆ: 'ನನ್ನಪ್ಪನಿಗೆ ತನ್ನ ಜಾತಿಯ ಬಗ್ಗೆ ವಿಶೇಷವಾದ ಅಭಿಮಾನ. ನಾವು ಕಾಶ್ಯಪಗೋತ್ರದ ನಾಮಶೂದ್ರರು. ಮೇಲ್ಜಾತಿಯವರ ಪ್ರಕಾರ ನಾವು ಅಸ್ಪೃಶ್ಯರು. ನಮ್ಮನ್ನು ಸಿಟ್ಟಿನಿಂದ ಚಾಂಡಾಲರು ಎಂದು ಕರೆಯುತ್ತಿದ್ದರು. ಆದರೆ, ನಮ್ಮ ಸಮುದಾಯದವರಾಗಲೀ ತಂದೆಯವರಾಗಲೀ ತಮ್ಮನ್ನು ಚಾಂಡಾಲರು ಎಂದು ತಿಳಿದಿರಲಿಲ್ಲ. ತಾವು ಉಚ್ಚ ಜಾತಿಯವರೆಂದೂ, ತಮ್ಮೊಳಗೆ ಬ್ರಾಹ್ಮಣರ ರಕ್ತ ಹರಿಯುತ್ತಿದೆ ಎಂದೇ ತಿಳಿದಿದ್ದರು' ಎಂದು ಹೇಳುವುದಲ್ಲದೆ, ಈ ಅಂಶಗಳನ್ನು ಐತಿಹ್ಯಗಳನ್ನು ಆಧರಿಸಿ ಚರ್ಚಿಸುತ್ತಾರೆ.

ಕೆಳವರ್ಗದ ಜನ ಜ್ಞಾನ, ಸಂಪತ್ತು, ಗೌರವವನ್ನು ಸಂಪಾದಿಸುವಂತಿಲ್ಲ; ವೇದಗಳನ್ನು ಓದುವ/ ಕೇಳುವ ಸ್ವಾತಂತ್ರ್ಯವಿಲ್ಲ. 'ಬ್ರಾಹ್ಮಣರನ್ನು ಮುಟ್ಟಿದರೆ ಮರಣದಂಡನೆ ಶಿಕ್ಷೆಯನ್ನು ನೀಡುವಂತೆ ನಮ್ಮ ಘನತೆವೆತ್ತ ಹಿಂದೂ ಧರ್ಮ ಸವರ್ಣೀಯರಿಗೆ ಅವಕಾಶ ಕಲ್ಪಿಸಿಕೊಟ್ಟಿದೆ... ಚಾಂಡಾಲರು ಊರ ಹೊರಗೆ ವಾಸ ಮಾಡಬೇಕೆಂದು ಶಾಸ್ತ್ರಗಳು ಫರ್ಮಾನು ಹೊರಡಿಸಿವೆ'. ಹೀಗೆ ಪುರಾಣ–ಇತಿಹಾಸದ ಹಿನ್ನೋಟಗಳನ್ನು ನೀಡಿ, 1872ರಲ್ಲಿ ದೇಶದ ಪ್ರಥಮ ಜನಗಣತಿ ನಡೆದಾಗ ಮೇಲ್ಜಾತಿಯವರು ಹಾಗೂ ಬ್ರಿಟಿಷ್ ಅಧಿಕಾರಿಗಳು ನಾಮಶೂದ್ರರನ್ನು ಚಾಂಡಾಲರೆಂದೇ ನಮೂದಿಸಿದ್ದನ್ನು ಪ್ರಸ್ತಾಪಿಸಿದ್ದಾರೆ. ಆಗ ಅದರ ವಿರುದ್ಧ ನಾಮಶೂದ್ರರು ಹೋರಾಟ ಮಾಡಿ, ವೇದ ಹಾಗೂ




ಚಾಂಡಾಲನೊಬ್ಬನ ಆತ್ಮವಿಮರ್ಶೆ
ಮೂಲ: ಮನೋರಂಜನ್ ಬ್ಯಾಪಾರಿ
ಕನ್ನಡಕ್ಕೆ: ಎಚ್.ಎಸ್. ನಾಗಭೂಷಣ
ಪು: 268; ಬೆ: ₹ 325
ಪ್ರ: ಸೃಷ್ಟಿ ಪಬ್ಲಿಕೇಷನ್ಸ್, ಬೆಂಗಳೂರು.
ಫೋನ್: 9845096668.

ಬ್ರಾಹ್ಮಣಿಕೆಯನ್ನು ವಿರೋಧಿಸುವ 'ಮಥುವಾ' ಎಂಬ ಹೊಸ ಧರ್ಮವನ್ನು ಸ್ವೀಕರಿಸುತ್ತಾರೆ. ಅದೇ ವೇಳೆ ಮಹಾರಾಷ್ಟ್ರದಲ್ಲಿ ಅಂಬೇಡ್ಕರ್ ಅವರ ಸಮಾಜ ಸುಧಾರಣೆಯ ಹೋರಾಟ ನಡೆಯುತ್ತಿತ್ತು. 'ಈ ಬೃಹತ್ ಹೋರಾಟಕ್ಕೆ ಮಣಿದ ಬ್ರಿಟಿಷ್ ಸರ್ಕಾರ ಜನಗಣತಿಯ ದಾಖಲೆಗಳಲ್ಲಿ ಚಾಂಡಾಲ ಹೆಸರನ್ನು ತೆಗೆದು 'ನಾಮಶೂದ್ರ' ಎಂದೇ 1911ರಲ್ಲಿ ದಾಖಲಿಸಿತು. ಅಧಿಕಾರಿಗಳು ಚಾಂಡಾಲ ಎಂದು ಉಪಯೋಗಿಸಿದರೆ ಕೆಲಸ ಕಳೆದುಕೊಳ್ಳುತ್ತಿದ್ದರು. ಹಾಗಾಗಿ ಮೇಲ್ಜಾತಿಯವರೂ ಒಪ್ಪಿಕೊಳ್ಳಲೇಬೇಕಾಯಿತು. ಅನಂತರ ಚಾಂಡಾಲರು ನಾಮಶೂದ್ರರಾದರು'. ಇಷ್ಟೆಲ್ಲಾ ಆದರೂ, ತಾರತಮ್ಯ ಮುಂದುವರಿದಿರುವ ಬಗ್ಗೆ ಬ್ಯಾಪಾರಿಯವರಿಗೆ ತುಂಬಾ ಅಸಮಾಧಾನವಿದೆ. ಬದಲಾವಣೆ ಎಂಬುದು ಹೃದಯದಲ್ಲಿ ಮತ್ತು